ಕರ್ನಾಟಕ ಸರ್ಕಾರ

ಸಂಖ್ಯೆ:ಕಾಶಿಇ:73:ಜಂ.ನಿ.ಜಮಾ:ಆಯವ್ಯಯ:2014-15/15-16

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:25-09-2017

# ಸುತ್ತೋಲೆ

ವಿಷಯ: ಖಾಸಗಿ ಅನುದಾನಿತ ಕಾಲೇಜುಗಳ ಆಡಳಿತ ಮಂಡಳಿಯು ವಿದ್ಯಾರ್ಥಿಗಳಿಂದ ದುಪ್ಪಟ್ಟು ದರದಲ್ಲಿ ವಸೂಲು ಮಾಡಿರುವ ಬೋಧನಾ ಮತ್ತು ಪ್ರಯೋಗಾಲಯ ಶುಲ್ಕವನ್ನು ಜಂಟಿ ಖಾತೆಗೆ ಜಮಾ ಮಾಡುವ ಕುರಿತು.

ಉಲ್ಲೇಖ:
1 ಸರ್ಕಾರದ ಆದೇಶ ಸಂಖ್ಯೆ:ಇಡಿ:141:ಯುಪಿಸಿ:76 ದಿನಾಂಕ:06.10.1977
2 ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ:551:ಯುಪಿಸಿ:99 ದಿನಾಂಕ:7.8.2003
3 ಸರ್ಕಾರದ ಆದೇಶ ಸಂಖ್ಯೆ:ಇಡಿ:139:ಯುಪಿಸಿ:2014 ದಿನಾಂಕ:18.10.2014
4 ಸರ್ಕಾರದ ಅರೆ ಸರ್ಕಾರಿ ಪತ್ರ ಸಂಖ್ಯೆ:ಇಡಿ:268:ಯುಪಿಸಿ:2014 ದಿನಾಂಕ:18.06.2015 & 27.02.2016

****

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿ ಉನ್ನತ ಶಿಕ್ಷಣವನ್ನು ಉತ್ತೇಜಿಸುವ ಸಲುವಾಗಿ ಸರ್ಕಾರವು ಖಾಸಗಿ ಪದವಿ ಕಾಲೇಜುಗಳಿಗೆ ತನ್ನ ಆರ್ಥಿಕ ಸಂಪನ್ಮೂಲಗಳನ್ನು ಆಧರಿಸಿ ಅನುದಾನ ನೀಡಿ ಸಂಹಿತೆಯನ್ವಯ ನಿರ್ವಹಣಾ ಅನುದಾನವನ್ನು ಕಾಲೇಜಿನ ಆಡಳಿತ ಮಂಡಳಿಗೆ ನೀಡಲಾಗುತ್ತಿದ್ದು, ನಂತರದಲ್ಲಿ ಉಲ್ಲೇಖ(1)ರ ಸರ್ಕಾರದ ಆದೇಶದನ್ವಯ ಅನುದಾನಿತ ಸಿಬ್ಬಂದಿಗಳಿಗೆ ನೇರವಾಗಿ ವೇತನಾನುದಾನವನ್ನು ವಿಸ್ತರಿಸುವ ಕ್ರಮವನ್ನು ಅನುಸರಿಸುತ್ತಾ ಬಂದಿರುತ್ತದೆ. ಈ ಆದೇಶದನ್ವಯ ಖಾಸಗಿ ಪದವಿ ಕಾಲೇಜಿನ ಆಡಳಿತ ಮಂಡಳಿಗಳು ಸರ್ಕಾರದೊಂದಿಗೆ ಮಾಡಿಕೊಳ್ಳಲಾದ ಒಪ್ಪಂದದಲ್ಲಿ ವಿದ್ಯಾರ್ಥಿಗಳಿಂದ ಬೋಧನಾ ಮತ್ತು ಪ್ರಯೋಗಾಲಯ ಶುಲ್ಕಗಳನ್ನು ದುಪ್ಪಟ್ಟು ದರಗಳಿಗಿಂತ ಹೆಚ್ಚಾಗಿ ವಸೂಲು ಮಾಡದಿರಲೂ ಮತ್ತು ಈ ಶುಲ್ಕವನ್ನು ಜಂಟಿ ಖಾತೆಗೆ ಜಮಾ ಮಾಡಲು ಒಪ್ಪಿಗೆ ನೀಡಿರುತ್ತದೆ. ನಂತರದಲ್ಲಿ ಸರ್ಕಾರದ ಉಲ್ಲೇಖ(2)ರ ಪ್ರಕಾರ ಕರ್ನಾಟಕ ಶಿಕ್ಷಣ ಸಂಸ್ಥೆಗಳು(ಕಾಲೇಜು ಶಿಕ್ಷಣ) ನಿಯಮಗಳು, 2003 ದಿನಾಂಕ: 07.08.2003ರ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಸದರಿ ಅಧಿಸೂಚನೆಯ ನಿಯಮ 18 ಉಪ ನಿಯಮ(4)ರಲ್ಲಿ ವಿದ್ಯಾರ್ಥಿಗಳಿಂದ ದುಪ್ಪಟ್ಟು ದರದಲ್ಲಿ ವಸೂಲು ಮಾಡಲಾದ ಬೋಧನಾ ಮತ್ತು ಪ್ರಯೋಗಾಲಯ ಶುಲ್ಕಗಳನ್ನು ಜಂಟಿ ಖಾತೆಗೆ ಜಮೆ ಮಾಡುವುದನ್ನು ಪುನರುಚ್ಚಿಸಲಾಗಿರುತ್ತದೆ. ಆದರೆ ಸ್ಥಳಿಯ ಮತ್ತು ಮಹಾಲೇಖಪಾಲರ ಲೆಕ್ಕ ತಪಾಸಣಾ ಸಮಯದಲ್ಲಿ 2004 ರಿಂದ 2014ರ ಅವಧಿಯಲ್ಲಿ ವಿದ್ಯಾರ್ಥಿಗಳಿಂದ ವಸೂಲು ಮಾಡಲಾದ ದುಪ್ಪಟ್ಟು ದರದ ಶುಲ್ಕವನ್ನು ಜಂಟಿ ಖಾತೆಗೆ ಜಮಾ ಮಾಡದಿರುವುದು ಕಂಡುಬಂದಿರುತ್ತದೆ.

ತದನಂತರದಲ್ಲಿ ಅನುದಾನಿತ ಕಾಲೇಜುಗಳಲ್ಲಿ ಪ್ರವೇಶಾತಿ ಹೊಂದಿರುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಉಲ್ಲೇಖ(3)ರ ಸರ್ಕಾರದ ದಿನಾಂಕ:18.10.2014ರ ಆದೇಶದ ಪ್ರಕಾರ ಭವಿಷ್ಯವರ್ತಿಯಾಗಿ ಕರ್ನಾಟಕ ಶಿಕ್ಷಣ ಸಂಸ್ಥೆಗಳು(ಕಾಲೇಜು ಶಿಕ್ಷಣ) ನಿಯಮಗಳು, 2003 ನಿಯಮ 18 ಉಪ ನಿಯಮ(4)ಕ್ಕೆ ತಿದ್ದುಪಡಿಯನ್ನು ತಂದು ದುಪ್ಪಟ್ಟು ದರದ ಬೋಧನಾ ಮತ್ತು ಪ್ರಯೋಗಾಲಯ ಶುಲ್ಕದಲ್ಲಿ ಒಂದು ದರವನ್ನು ವಿದ್ಯಾರ್ಥಿಗಳ ಶೈಕ್ಷಣಿಕ ಹಿತಾಸಕ್ತಿ ಮತ್ತು ಕಾಲೇಜು ಅಭಿವೃದ್ಧಿಗೆ ಉಪಯೋಗಿಸಿಕೊಳ್ಳಲು ಹಾಗೂ ಮತ್ತೊಂದು ದರವನ್ನು ಜಂಟಿ ಖಾತೆಗೆ ಜಮಾ ಮಾಡಲು

--.

ಕಡ್ಡಾಯಗೊಳಸಲಾಗಿದೆ. ಹಾಗೂ 2004 ರಿಂದ 2014ರ ಅವಧಿಯ ಬಾಕಿ ಶುಲ್ಕವನ್ನು ಏಕಾಏಕಿ ಜಂಟಿ ಖಾತೆಗೆ ಜಮಾ ಮಾಡಲು ಅನಾನುಕೂಲವಿರುವ ಅಂಶವನ್ನು ಪರಿಗಣಿಸಿ ಜಮಾ ಮಾಡಬೇಕಾದ ಮೊತ್ತವನ್ನು 06 ತಿಂಗ ಅವಧಿಯಲ್ಲಿ ಒಂದು ಕಂತಿನಂತೆ ಒಟ್ಟು 04 ಕಂತುಗಳಲ್ಲಿ ಜಮೆ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ. ಸದ ಆದೇಶದ ನಂತರವು ಸಹ ಬಾಕಿ ಶುಲ್ಕವನ್ನು ಜಂಟಿ ಖಾತೆಗೆ ಜಮಾ ಮಾಡದ ಹಿನ್ನಲೆಯಲ್ಲಿ ಸರ್ಕಾರದ ಉಲ್ಲೇಖ(4) ಪತ್ರಗಳಲ್ಲಿ, ಈ ಕಛೇರಿಯ ಹಲವಾರು ಸುತ್ತೋಲೆ ಮತ್ತು ಪ್ರಾದೇಶಿಕ ಜಂಟಿ ನಿರ್ದೇಶಕರ ಸುತ್ತೋಲೆ/ನೋಟೀಸ್‌ಗಳ ಜಂಟಿ ಖಾತೆಗೆ ಜಮಾ ಮಾಡಲು ಸೂಚನೆ ನೀಡಲಾಗಿದ್ದರು ಸಹ ಪೂರ್ಣವಾಗಿ ಬಾಕಿ ಶುಲ್ಕವನ್ನು ಜಂಟಿ ಖಾತೆಗೆ ಜಮ ಮಾಡಿರುವುದಿಲ್ಲ. ಅಲ್ಲದೇ ಉಲ್ಲೇಖ(3)ರಲ್ಲಿ ಸರ್ಕಾರ ನೀಡಿರುವ ಅವಧಿಯ ಮುಕ್ತಾಯವಾಗಿದ್ದು ಸಹ ಬಾಕಿ ಶುಲ್ಕವನ ಜಂಟಿ ಖಾತೆಗೆ ಜಮಾ ಮಾಡದಿರುವುದು ಕಂಡುಬಂದಿರುತ್ತದೆ.

ಆದ್ದರಿಂದ ಖಾಸಗಿ ಅನುದಾನಿತ ಪದವಿ ಮತ್ತು ಬಿ.ಎಡ್. ಕಾಲೇಜುಗಳ ಪ್ರಾಂಶುಪಾಲರುಗಳು ಬಾಕಿ ಶುಲ್ಕವನ ಶೇಕಡ 10ರಷ್ಟು ಬಡ್ಡಿಯೊಂದಿಗೆ ಕೂಡಲೇ ಜಂಟಿ ಖಾತೆಗೆ ಜಮಾ ಮಾಡಿ ಮಾಹಿತಿಯನ್ನು ಆಯಾ ಜಂ ನಿರ್ದೇಶಕರುಗಳಗೆ ನೀಡಲು ಸೂಚಿಸಿದೆ. ತಪ್ಪಿದ್ದಲ್ಲಿ ಕರ್ನಾಟಕ ಶಿಕ್ಷಣ ಸಂಸ್ಥೆಗಳು(ಕಾಲೇಜು ಶಿಕ್ಷಣ) ನಿಯಮಗಳ 2003ರ ನಿಯಮ 13ರ ಪ್ರಕಾರ ಪ್ರಾಂಶುಪಾಲರ ವೇತನವನ್ನು ತಡೆಹಿಡಿಯಲಾಗುವುದು. ಆದಾಗ್ಯೂ ಬಾಕಿ ಶುಲ್ಕವನ ಜಂಟಿ ಖಾತೆಗೆ ಜಮಾ ಮಾಡಲು ವಿಫಲವಾದ್ದಲ್ಲಿ ಕರ್ನಾಟಕ ಶಿಕ್ಷಣ ಕಾಯ್ದೆಯ ಸೆಕ್ಷನ್ 53ರ ಪ್ರಕಾರ ಕಾಲೇಜಿ ನೀಡಲಾಗುತ್ತಿರುವ ವೇತನಾನುದಾನವನ್ನು ಶಾಶ್ವತವಾಗಿ ಹಿಂಪಡೆಯಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು.

ಕಾಲೇಜು ಶಿಕ್ಷಣ ಆಯುಕ್ತರು

26/9/17

ಸಂ : ಪ್ರಾಶಿಜಂ : ಶಾಶಿಖ : ಎಸ್ಟಿ : ೨೦೧೫-೧೬ (ಭಾಗ-೨)

ಪ್ರಾದೇಶಿಕ ಜಂಟಿ ನಿರ್ದೇಶಕರು ಕಛೇರಿ
ಕಾಲೇಜು ಶಿಕ್ಷಣ ಇಲಾಖೆ
ಮೈಸೂರು-570 005
ದಿನಾಂಕ : ೨೬-೯-೨೦೧೭

ಎಲ್ಲಾ ಖಾಸಗಿ ಅನುದಾನಿತ ಪದವಿ ಮತ್ತು ಬಿ.ಎಡ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಈ ಸುತ್ತೋಲೆಯನ್ನು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

ಪ್ರಾದೇಶಿಕ ಜಂಟಿ ನಿರ್ದೇಶಕರು
ಕಾಲೇಜು ಶಿಕ್ಷಣ ಇಲಾಖೆ
ಮೈಸೂರು-570 005